ಮಾರ್ಚ್ 18, 2004

## ನಿವಾಸಿ ವ್ಯಕ್ತಿಗಳಿಗೆ 25,000 ಅಮೇರಿಕನ್ ಡಾಲರ್‌ನ ಉದಾರೀಕರಣಗೊಳಿಸಿದ ಹಣದ ರವಾನೆ ಯೋಜನೆ – ಬಂಡವಾಳ ತೊಡಗಿಸುವವರ ರಕ್ಷಣೆ – ಬಹಿರಂಗಪಡಿಸುವಿಕೆಯ ಅಗತ್ಯಗಳು

4ನೇ ಫೆಬ್ರವರಿ 2004ರ ಎ.ಪಿ. ಡಿಐಆರ್ (ಶ್ರೇಣಿಗಳು) ಸುತ್ತೋಲೆ ಸಂಖ್ಯೆ 64ರ ನಿಬಂಧನೆಗಳಿಗನುಸಾರವಾಗಿ, ರಿಸರ್ವ್ ಬ್ಯಾಂಕು ಪ್ರತಿ ಕ್ಯಾಲೆಂಡರ್ ವರ್ಷಕ್ಕೆ 25,000 ಅಮೇರಿಕನ್ ಡಾಲರ್ ಗೆ ಮೀರದ ಮೊಬಲಗಿನ ಹಣದ ರವಾನೆ ಮಾಡಲು ನಿವಾಸಿ ವ್ಯಕ್ತಿಗಳಿಗೆ ಅನುಮತಿಸಿ, ಯೋಜನೆಯ ಕಾರ್ಯ ನಿರ್ವಹಿಸಿದೆ. ಈ ಸೌಲಭ್ಯವು ಈಗ, ಯಾವುದೇ ಚಾಲ್ತಿ ಅಥವಾ ಬಂಡವಾಳ ವ್ಯವಹಾರ ಅಥವಾ ಅವುಗಳೆರಡರ ಸಂಯೋಜನೆಯೊಂದಿಗೆ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ 25000 ಅಮೇರಿಕನ್ ಡಾಲರ್ (ಯುಎಸ್‌ಡಿ) ಹಣದ ರವಾನೆ ಮಾಡಲು ಲಭ್ಯವಿದೆ.

ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದೇಶಿ ಬ್ಯಾಂಕ್‌ಗಳು ಹಾಗೆಯೇ ಭಾರತೀಯ ಬ್ಯಾಂಕುಗಳು, ನಂತರದಲ್ಲಿ ಮೇಲಿನ ಯೋಜನೆಯಡಿ, ನಿವಾಸಿಗಳಿಂದ ಠೇವಣಿಗಳನ್ನು ಕೋರುತ್ತಿದೆ (ಆಕರ್ಷಿಸುತ್ತಿದೆ). ನಿರ್ದಿಷ್ಟ ಬಡ್ಡಿ ದರಗಳಲ್ಲಿ ವಿದೇಶಿ ಕರೆನ್ಸಿ ಠೇವಣಿ/ನಿಧಿಗಳನ್ನು ಸಾಗರೋತ್ತರ ಕೇಂದ್ರಗಳಲ್ಲಿ ಇಡಲಾಗುವುದೆಂದು ಕೋರಿದಂತಹ ಅನೇಕ ಜಾಹಿರಾತುಗಳು ಗಮನಕ್ಕೆ ಬಂದಿದೆ. ಈ ಜಾಹಿರಾತುಗಳು, ಸಮರ್ಥ ಠೇವಣಿದಾರರಿಗೆ ಮಾರ್ಗದರ್ಶನ ನೀಡಲು ಯುಕ್ತ ಮಾಹಿತಿಗಳನ್ನು ಒಳಗೊಂಡಿಲ್ಲ. ಭಾರತದಲ್ಲಿ ಕಾರ್ಯನಿರ್ವಹಣೆ ಇಲ್ಲದ ವಿದೇಶಿ ಘಟಕಗಳ ವಿದೇಶಿ ಕರೆನ್ಸಿ ಠೇವಣಿಗಳನ್ನು ಆಕರ್ಷಿಸುವ ಯೋಜನೆಗಳ ಮಾರುಕಟ್ಟೆಗೆ ಕೂಡ ಮೇಲುವಿಚಾರಣೆಯ ಅಗತ್ಯವಿದೆ.

ಆದುದರಿಂದ, ಲೈಸೆನ್ಸ್ ಹೊಂದಿರುವ ಬ್ಯಾಂಕಿಂಗ್ ಕಂಪನಿಯಲ್ಲದೆ ಇತರೇ ಯಾವುದೇ ಸಂಸ್ಥೆಯೂ, ನಿವಾಸಿಗಳಿಂದ ವಿದೇಶಿ ಕರೆನ್ಸಿ ಠೇವಣಿಗಳನ್ನು ಆಕರ್ಷಿಸುವಂತಿಲ್ಲ ಎಂದು ಸಾರ್ವಜನಿಕ ಹಿತಾಸಕ್ತಿಯಿಂದ ನಿರ್ಣಯಿಸಲಾಗಿದೆ. ಅಲ್ಲದೆ, ಭಾರತದಲ್ಲಿ ಕಾರ್ಯನಿರ್ವಹಣೆ ಇಲ್ಲದ ಬ್ಯಾಂಕುಗಳೂ ಸೇರಿದಂತೆ ಭಾರತೀಯ ಮತ್ತು ವಿದೇಶಿ ಬ್ಯಾಂಕುಗಳೆರಡೂ, ಅದರ ವಿದೇಶಿ/ಸಾಗರೋತ್ತರ ಶಾಖೆಗಳಿಗೆ ವಿದೇಶಿ ಕರೆನ್ಸಿ ಠೇವಣಿಗಳನ್ನು ಆಕರ್ಷಿಸಲು ಇಲ್ಲವೆ ಸಾಗರೋತ್ತರ ಮ್ಯೂಚುಯಲ್ ಫಂಡ್‌ಗಳಿಗೆ ಅಥವಾ ಯಾವುದೇ ಇತರ ವಿದೇಶಿ ಹಣಕಾಸು ಸೇವೆಗಳ ಕಂಪನಿಗೆ ಏಜೆಂಟರುಗಳಾಗಿ ಕಾರ್ಯ ನಿರ್ವಹಿಸಲು ಭಾರತದಲ್ಲಿ ಭಾರತೀಯ ನಿವಾಸಿಗಳಿಗೆ ಶಿಫಾರಸು ಮಾಡುವ ಯೋಜನೆಗಳಿಗೆ ಆರ್‌ಬಿಐನಿಂದ ಪೂರ್ವಾನುಮೋದನೆಯನ್ನು ಕೋರಬೇಕು.

— ಬ್ಯಾಂಕುಗಳು ಅಂಥ ಅನುಮೋದನೆಯನ್ನು ಕೋರುವಾಗ, ಅವುಗಳು ಆರ್‌ಬಿಐಗೆ ಈ ಕೆಳಕಂಡ ಮಾಹಿತಿಯನ್ನು ಒದಗಿಸಬೇಕು:

— ಅದರ ಪೂರ್ಣ ವಿಳಾಸದೊಂದಿಗೆ ಬ್ಯಾಂಕ್‌ನ ಹೆಸರು ಮತ್ತು ಅದರ ಮುಖ್ಯ ಕಚೇರಿಯ ಸ್ಥಳ (ಮತ್ತು ಸ್ಥಳೀಯ ಕಚೇರಿಗಳು ಅನ್ವಯವಾಗುವ ಹಾಗಿದ್ದರೆ);

— ಬ್ಯಾಂಕ್‌ನ ಕೇಂದ್ರ ಕಚೇರಿಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುವ ಮೇಲ್ವಿಚಾರಣಾ ಪ್ರಾಧಿಕಾರದ ಗುರುತು;

— 'ಮೂಡಿ'ಯ; ಅಥವಾ 'ಸ್ಟಾಂಡರ್ಡ್ ಅಂಡ್ ಪೂರ್' ನಂತಹ ಅಂತರರಾಷ್ಟ್ರೀಯವಾಗಿ ಒಪ್ಪಿಕೊಳ್ಳಬಹುದಾದ ಬೆಲೆಯನ್ನು ಅಂದಾಜು ಮಾಡುವ ಏಜೆನ್ಸಿಯು ನೀಡಲಾದ ದೀರ್ಘಾವಧಿ ಸ್ಥಾನ/ಅರ್ಹತೆ

— ಮಾರುಕಟ್ಟೆ ಮಾಡಲಾಗುವ ಯೋಜನೆಯ ಪೂರ್ಣ ವಿವರಗಳು.

ಈ ಸಂಬಂಧವಾಗಿ ಅರ್ಜಿಗಳನ್ನು, ಪ್ರಭಾರಿ ಮುಖ್ಯ ಜನರಲ್ ಮ್ಯಾನೇಜರ್, ಡಿ.ಬಿ.ಓ.ಡಿ, ಭಾರತೀಯ ರಿಸರ್ವ್ ಬ್ಯಾಂಕು, ಕೇಂದ್ರ ಕಚೇರಿ, ಕೇಂದ್ರ–1, ವರ್ಲ್ಡ್ ಟ್ರೇಡ್ ಸೆಂಟರ್, ಕಫ್ ಪೆರೇಡ್, ಮುಂಬಯಿ – 400 005, ಇವರಿಗೆ ಸಲ್ಲಿಸಬಹುದು.

ಈ ಮೇಲಿನ ಸೂಚನೆಗಳು, ಈ ಯೋಜನೆಯಡಿ, ಅನುಮತಿಸಲಾದ ಬಂಡವಾಳ ಖಾತೆ ವ್ಯವಹಾರಗಳಲ್ಲಿ ತೊಡಗಿಸುವುದರಿಂದ ನಿವಾಸಿ ವ್ಯಕ್ತಿಗಳ ಸ್ವಾತಂತ್ರ್ಯವನ್ನು ನಿರ್ಬಂಧಿಸುವುದಿಲ್ಲ.

ಬ್ಯಾಂಕಿಂಗ್ ಘಟಕಗಳು ಮಾತ್ರವೇ, ಸಾರ್ವಜನಿಕರಿಂದ, ವಿದೇಶಿ ಕರೆನ್ಸಿ ಠೇವಣಿಗಳನ್ನು ಕೋರಬಹುದು ಮತ್ತು ಅಂಥ ಘಟಕಗಳು, ಕನಿಷ್ಠ ವಿಷಯಗಳನ್ನು ಬಹಿರಂಗಗೊಳಿಸಬೇಕು ಎಂದು ಖಾತರಿಗೊಳಿಸಲು ಈ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದೆ. ನಿವಾಸಿಗಳು, ಸಾಗರೋತ್ತರ ಕೇಂದ್ರಗಳಲ್ಲಿ ವಿದೇಶಿ ಕರೆನ್ಸಿ ಠೇವಣಿಗಳನ್ನು ಮಾಡುವ ಮೊದಲು ಅವರ ಸ್ವಂತ ದಕ್ಷ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಮತ್ತು ಅಪಾಯಗಳನ್ನು/ಹಾನಿಗಳನ್ನು ಅರ್ಥಮಾಡಿಕೊಳ್ಳಬೇಕು.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/1098